ಉಪಾಧ್ಯಕ್ಷರು : ತಾವು ಮೊದಲೇ ನೋಟೀಸ್ ಕಳುಹಿಸದೇ ಇರುವುದರಿಂದ ಈ ವಿಷಯದ ಬಗ್ಗೆ ಈಗ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಈಗ ಪ್ರಸ್ತಾವನೆ ಆಗಿದೆ. ಮತ್ತೇಕೆ ಅದರ ಬಗ್ಗೆ ಹೇಳುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬೇರೆ ಬೇರೆ ಪ್ರದೇಶಗಳಲ್ಲಿ ಆಗಿದೆ. ಅದರ ಬಗ್ಗೆ ಹೇಳುತ್ತೇನೆ. ನಮ್ಮ ರಾಜ್ಯದ ಹಿತ ಕಾಪಾಡುವುದಕ್ಕೆ ಯಾರ ಜೊತೆ ಬೇಕಾದರೂ ನಾವು ವ್ಯಾಜ್ಯ ಮಾಡೋಣ. ನಮ್ಮ ರಾಜ್ಯದ ಹಿತವನ್ನು ನಾವೆಲ್ಲರೂ ಕೂಡಿಯೇ ಕಾಪಾಡೋಣ.

ಉಪಾಧ್ಯಕ್ಷರು : ಅದಕ್ಕೆ ಯಾರದ್ದೂ ಭಿನ್ನಾಭಿಪ್ರಾಯವಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್ಕಾರದ ಗಮನಕ್ಕೆ 2000 ಇಸವಿಯಲ್ಲಿಯೇ ಬಂದಿದ್ದರೂ ಕೂಡ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಈ ರೀತಿ ನಿರ್ಲಕ್ಷ್ಯ ಆಗಬಾರದು. ಆದ್ದರಿಂದ ಮೊದಲು ಎರಡೂ ಸರ್ಕಾರದ ಕಡೆಯಿಂದ ಸರ್ವೆ ಮಾಡಿಸಿ ನಮ್ಮ ರಾಜ್ಯದ ಗಡಿಯನ್ನು ಗುರುತಿಸಿಕೊಳ್ಳುವ ಕೆಲಸವಾಗಬೇಕು.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಜಯಲಲಿತಾ ಜೊತೆ ಹೋದರೆ ಅಡ್ಡಿಯಿಲ್ಲ, ವೀರಪ್ಪನ್ ಜೊತೆ ಹೋಗ್ತಾ ಇದ್ದಾರಲ್ಲಾ, ಇದು ಅವಸ್ಥೆ. ವೀರಪ್ಪನ್ ಜೊತೆ ಸಖ್ಯ ಮಾಡುವುದಕ್ಕಿಂತ ಜಯಲಲಿತ ಜೊತೆ ಇರುವುದು ಒಳ್ಳೆಯದು.

ಶ್ರೀ ಸಿ ಗುರುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರಕ್ಕೆ ನನ್ನದೊಂದು ಸಲಹೆ ಇದೆ. ಈ ಸಮಸ್ಯೆ ಎಲ್ಲಾ ತಾನಾಗಿ ತಾನೇ ಹೊರಟುಹೋಗುತ್ತದೆ. ಆ ವೀರಪ್ಪನ್‌ನ್ನು ಮೊದಲು ಹಿಡಿದುಬಿಟ್ಟರೆ ಎಲ್ಲವೂ ಸರಿಹೋಗುತ್ತದೆ. ಆ ದಿಕ್ಕಿನಲ್ಲಿ ಮನಸ್ಸು ಮಾಡಿ.

ವಿಷಯ : ನೆಟ್‌ವರ್ಕ್ ಲಾಟರಿ ನಿಯಮಾವಳಿಗಳನ್ನು ಮಂಡಿಸುವ ಬಗ್ಗೆ

†**ಶ್ರೀ ಬಿ. ಸೋಮಶೇಖರ್** : ಮಾನ್ಯ ಉಪಾಧ್ಯಕ್ಷರೆ, ಸಭೆಯ ಮುಂದಿಡಲಾಗುವ ಪಟ್ಟಿಯನ್ನು ಇಲ್ಲಿ ಇಟ್ಟಿದ್ದಾರೆ. 15ನೇ ತಾರೀಖು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಪಟ್ಟಿಯನ್ನು ಪ್ರಿಂಟ್ ಮಾಡಲಾಗಿತ್ತು. ನಾನು ಎರಡು ವಿಚಾರದ ಬಗ್ಗೆ, ಅಂದರೆ ಮೊದಲನೆಯದಾಗಿ 2001ರಲ್ಲಿ ಹೊರಡಿಸಿದ್ದಂಥ ನೋಟಿಫಿಕೇಶನ್‌ನ್ನು ಕರ್ನಾಟಕ ಗಣಕೀಕೃತ ನೆಟ್‌ವರ್ಕ್ ಲಾಟರಿ ನಿಯಮಾವಳಿಗಳನ್ನು ಏನು ಹೊರಡಿಸಿದ್ದೀರಿ ಅದನ್ನು ಸಭೆಯ ಮುಂದೆ ಇಡಬೇಕು. ಮತ್ತು 1999ರ ಕರ್ನಾಟಕ ಲಾಟರಿ ನಿಯಮಗಳನ್ನು ರಚಿಸಿ ಇದನ್ನು 2000ದಲ್ಲಿ ಹೊರಡಿಸಿತಕ್ಕಂಥ ನಿಯಮಾವಳಿಗಳನ್ನು ನಿಯಮಾವಳಿಗಳ ಪ್ರಕಾರ ಇಡಬೇಕು. 2003 ರಲ್ಲಿ ಹೊರಡಿಸಿರತಕ್ಕಂಥ ನಿಯಮಾವಳಿಗಳನ್ನು ತಾವು ಇಟ್ಟಿದ್ದೀರಿ. ಈಗ ಅದಕ್ಕೆ ನಾನು ಒಂದು ನೋಟೀಸ್ ಕೊಟ್ಟಿದ್ದೇನೆ, ಮೋಶನ್ ಮೂವ್ ಮಾಡಿದ್ದೇನೆ. ಒಬ್ಬ ಸದಸ್ಯನಾಗಿ ಇದರ ಬಗ್ಗೆ ಚರ್ಚೆ ಮಾಡಬೇಕು ಎಂದು ನೋಟೀಸ್ ಕೊಟ್ಟಿದ್ದೇನೆ. ನಾನು ಕೊಟ್ಟ ತಕ್ಷಣ ಅವರೆಡನ್ನು ಬಿಟ್ಟು ಬೇರೆಯೊಂದನ್ನು ಸಭೆಯ ಮುಂದೆ ಇಡಲಾಗುವ ಕಾಗದ ಪತ್ರಗಳ ನೋಟೀಸನ್ನು ಮಾಡಿದ್ದಾರೆ. ಈ ಸಭೆಯಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿಸುತ್ತಿದ್ದೇನೆ. ಇವೆರಡೂ ನೋಟಿಫಿಕೇಶನ್‌ಗಳನ್ನು ತಾವು ಸಭೆಯಲ್ಲಿ ಇಡಬೇಕು, ಮಂಡಿಸಬೇಕು. ನಿಯಮಾವಳಿಗಳ ಪ್ರಕಾರ ಮಂಡಿಸಬೇಕು.

ಉಪಾಧ್ಯಕ್ಷರು : ವ್ಯವಸ್ಥೆ ಮಾಡುತ್ತೇವೆ. ಪೇಪರ್ ಲೀ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಶ್ರೀ ಬಿ. ಸೋಮಶೇಖರ್ : ಈಗಾಗಲೇ ಮಂಡಿಸಿದ್ದೀರಲ್ಲಾ. ಅದರಲ್ಲಿ ಇವೆರಡು ನೋಟಿಫಿಕೇಶನ್‌ಗಳು ಬಿಟ್ಟುಹೋಗಿವೆ. ಈಗ ತಾವೇನು ಇವೊತ್ತು ಮಂಡಿಸಿದ್ದೀರಿ ಅದರಲ್ಲಿ 15ನೇ ತಾರೀಖಿನಲ್ಲಿದ್ದಂಥ ನೋಟಿಫಿಕೇಶನ್‌ಗಳನ್ನು ಬಿಟ್ಟು ಮಂಡಿಸಿದ್ದಾರೆ. ಅದೂ ನಾನು ನೋಟಿಸ್ ಕೊಟ್ಟಮೇಲೆ. ಏನಿದರರ್ಥ? ಆದುದರಿಂದ ನಾನು ಕೇಳುವುದೇನೆಂದರೆ ಆ ಎರಡೂ ನೋಟಿಫಿಕೇಶನ್‌ಗಳನ್ನು ಇದರ ಜೊತೆ ಮಂಡಿಸಬೇಕು. ಇವು ಎರಡು ವರ್ಷ, ಮೂರು ವರ್ಷಗಳ ಹಿಂದೆ ಹೊರಡಿಸಿರತಕ್ಕಂಥ ನೋಟಿಫಿಕೇಶನ್‌ಗಳಾಗಿವೆ. ಮೊನ್ನೆ ಮೊನ್ನೆ ಎರಡ್ಮೂರು ತಿಂಗಳ ಹಿಂದೆ ಹೊರಡಿಸಿರತಕ್ಕಂಥ ನೋಟಿಫಿಕೇಶನ್‌ನ್ನು ಇಟ್ಟಿದ್ದೀರಿ. ಮೂರು ವರ್ಷದ ಹಿಂದೆ ಹೊರಡಿಸಿರುವುದನ್ನು ಏಕೆ ಇಟ್ಟಿಲ್ಲ? ಅದೂ ನಾನು ನೋಟೀಸ್ ಕೊಟ್ಟಮೇಲೆ. ನಿಯಮಾವಳಿಗಳ ಪ್ರಕಾರ ಅದನ್ನು ಮಂಡಿಸಬೇಕೆಂದು ನಾನು ಕೇಳುತ್ತಿರುವುದು.

ಉಪಾಧ್ಯಕ್ಷರು : ಈಗ ಅದನ್ನು ಸರಿಯಾದಂಥ ರೀತಿಯಲ್ಲಿ ಮಂಡಿಸುವುದಕ್ಕೆ ಅಧ್ಯಕ್ಷರು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಸೋಮಶೇಖರ್ : 15ನೇ ತಾರೀಖು ಪ್ರಿಂಟ್ ಆಗಿದ್ದಾಗ ಅದು ಸರಿಯಾಗಿ ಇರಲಿಲ್ಲವೆ? 15ನೇ ತಾರೀಖಿನ ಪ್ರೊಸೀಡಿಂಗ್ಸ್‌ನಲ್ಲಿ ನೀವು ಮಂಡಿಸಿದ್ದೀರಲ್ಲಾ, ಸರಿಯಾಗಿರಲಿಲ್ಲವೆ? ಪ್ರಿಂಟ್ ತಪ್ಪಾಗಿತ್ತೇ? ಅಕ್ಷರಗಳು ತಪ್ಪಾಗಿತ್ತೇ? ಏನಾಗಿತ್ತು ಎಂಬುದನ್ನು ಹೇಳಿ. ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಇದಕ್ಕೆ ಉತ್ತರ ಹೇಳಬೇಕು. ತಾವು ಬಹಳ ಹೇಳುತ್ತಿರುತ್ತೀರಿ, ಇದರ ಬಗ್ಗೆ, You please educate us in this.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈಗ ವಿಚಾರ ಎತ್ತಿದ್ದೀರಿ. ಕಳುಹಿಸಿಕೊಡಿ. ಏನಾಗಿದೆ ನೋಡುತ್ತೇವೆ. I have not laid.

ಶ್ರೀ ಬಿ. ಸೋಮಶೇಖರ್ : ತಾವು ಆಶ್ವಾಸನೆ ಕೊಡಿ. Lay before the table tomorrow or day after tomorrow ಎಂದು ಹೇಳಿ.

Sri D.B. Chandre Gowda : I have not laid.

ಶ್ರೀ ಬಿ. ಸೋಮಶೇಖರ್ : ನೋ, ನೋ, ತಾವು ಹೇಳುತ್ತಿರುತ್ತೀರಿ, ನಿಯಮಾವಳಿಗಳ ಪ್ರಕಾರ ನಡೆಯಬೇಕು ಸ್ವಾಮಿ ಇವೆಲ್ಲಾ ಇದ್ದ ಇದ್ದಾ ಹಾಗೆ ಮಾಡುವುದಕ್ಕಾಗುವುದಿಲ್ಲ ಎನ್ನುತ್ತಿರುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಯಮಾವಳಿಗಳ ಪ್ರಕಾರ ನಡೆದಿಲ್ಲ ಎನ್ನುವುದಕ್ಕೆ ನೀವು ಸಾಕ್ಷ್ಯಾಧಾರಗಳನ್ನು ಒದಗಿಸಿದರೆ ನಾವು ಅದನ್ನು ನೋಡುತ್ತೇವೆ.

ಶ್ರೀ ಬಿ. ಸೋಮಶೇಖರ್ : ನಾನು ಈಗ ಹೇಳಿದೆನಲ್ಲಾ.

Sri D.B. Chandre Gowda : Just now he has raised.

ಶ್ರೀ ಬಿ. ಸೋಮಶೇಖರ್ : ನಾನು ಹೇಳುತ್ತಿರತಕ್ಕಂಥದ್ದು 15ನೇ ತಾರೀಖು ಹೊರಡಿಸಿತಕ್ಕಂಥ.

ಉಪಾಧ್ಯಕ್ಷರು : ಈಗ ತಮ್ಮ ಕಡೆಯಿಂದ ನೋಟೀಸ್ ಬಂದಿದೆ. ಪರಿಶೀಲನೆ ಮಾಡಿ ಸೋಮವಾರದ ದಿವಸ ಮಂಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಈಗ ಶೂನ್ಯ ವೇಳೆಯಲ್ಲಿ ಅರಗ ಜ್ಞಾನೇಂದ್ರರವರು ಮಾತನಾಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಕೆಲವು ಪ್ರಮುಖ ವಾದ ವಿಚಾರಗಳನ್ನು ಪ್ರಸ್ತಾಪ ಮಾಡಲು ಕೊಟ್ಟಿದ್ದೆ. ಈಗ ತೆಗೆದುಕೊಳ್ಳುತ್ತೀರಾ?

ಉಪಾಧ್ಯಕ್ಷರು : ಇಲ್ಲಿ ಕೊಟ್ಟಿದ್ದಾರೆ. ತೆಗೆದುಕೊಳ್ಳುತ್ತೇನೆ. ಆರಗ ಜ್ಞಾನೇಂದ್ರರವರೇ, ಒಂದು ರೂಪಾಯಿ ಸ್ಟ್ಯಾಂಪ್ ಡ್ಯೂಟಿ ಬಗ್ಗೆ ಮಾಡನಾಡಿ.

ವಿಷಯ: ರೆವಿನ್ಯೂ ಸ್ಟ್ಯಾಂಪ್ ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದು

†**ಶ್ರೀ ಆರಗ ಜ್ಞಾನೇಂದ್ರ** : ಮಾನ್ಯ ಉಪಾಧ್ಯಕ್ಷರೆ, ಇನ್ನು ಮುಂದೆ ಸ್ಟ್ಯಾಂಪ್ ಪೇಪರ್‌ಗಳನ್ನು ಇನ್‌ಸಿಸ್ಟ್ ಮಾಡುವುದಿಲ್ಲವೆಂದು ಈಗಾಗಲೇ ಸರ್ಕಾರ ಹೇಳಿದೆ. ಅದರಲ್ಲೂ ವಿಶೇಷವಾಗಿ ಒಂದು ರೂಪಾಯಿ, ಎರಡು ರೂಪಾಯಿ ರೆವಿನ್ಯೂ ಸ್ಟ್ಯಾಂಪ್‌ಗಳನ್ನು ಈಗಲೂ ಕೂಡ ಅನೇಕ ಕಛೇರಿಗಳಲ್ಲಿ ಇನ್‌ಸಿಸ್ಟ್ ಮಾಡುತ್ತಿದ್ದಾರೆ. ಇದಕ್ಕಾಗಿ ಸಾಕಷ್ಟು ಪರದಾಟ ನಡೆಯುತ್ತಿದೆ. 20 ರೂಪಾಯಿ, 30 ರೂಪಾಯಿಗಳಿಗೆಲ್ಲಾ ಇವು ವ್ಯಾಪಾರವಾಗುತ್ತಿವೆ. ಇಂಥ ಒಂದು ಪರಿಸ್ಥಿತಿಯಲ್ಲಿ ಸಾಮಾನ್ಯ ಜನರ ಪರದಾಟವನ್ನು ತಪ್ಪಿಸುವುದಕ್ಕೆ ಸರ್ಕಾರ ಏನನ್ನಾದರೂ ಮಾಡಬೇಕೆಂದು ಹೇಳಿ ಕಳೆದ ಅಧಿವೇಶನದಲ್ಲಿ ಹೇಳಿತ್ತು. ನೀವು ಸ್ಟ್ಯಾಂಪ್‌ಗಳನ್ನು ಒದಗಿಸಿ, ಒದಗಿಸದಿದ್ದರೆ ಸ್ಟ್ಯಾಂಪ್‌ಗಳನ್ನು ಇನ್‌ಸಿಸ್ಟ್ ಮಾಡುವುದನ್ನು ಕೈಬಿಡಿ ಎಂದು ನಾವು ಹೇಳಿದ್ದೆವು. ಇವೆರಡರ ಬಗ್ಗೆಯೂ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುವ ಜವಾಬ್ದಾರಿಕೆಯನ್ನು ಸರ್ಕಾರ ಮಾಡಿಲ್ಲ. ಇವೊತ್ತು ಸಾಮಾನ್ಯ ಜನರು ಈ ಸ್ಟ್ಯಾಂಪ್‌ಗಾಗಿ ಎಲ್ಲೆಲ್ಲೋ ತಿರುಗಾಡಿಕೊಂಡು ಪರದಾಡುತ್ತಿದ್ದಾರೆ. ಕೆಲವರು ಇದೇ ಒಂದು ಅವಕಾಶ ಎಂದು ತಿಳಿದು ಸ್ಟ್ಯಾಂಪ್ ಪೇಪರ್‌ಗಳನ್ನು ಬ್ಲ್ಯಾಕ್‌ನಲ್ಲಿ ಮಾರತಕ್ಕಂಥ ಜನರು ಸಾಕಷ್ಟು ಹುಟ್ಟಿಕೊಂಡಿದ್ದಾರೆ. ಸಾಕಷ್ಟು ಹೆಚ್ಚು ಹಣಕ್ಕೆ ಈ ಸ್ಟ್ಯಾಂಪ್ ಪೇಪರ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ. ಈ ರೀತಿಯಿಂದಾಗಿ ಒಂದು ಕಡೆ ಜನರಿಂದ ಹಣದ ಸುಲಿಗೆ ಆಗುತ್ತಿದ್ದರೆ ಇನ್ನೊಂದು ಕಡೆ ಜನರಿಗೆ ಕಾಲದ ಅಪವ್ಯಯವೂ ಕೂಡ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ದಯಮಾಡಿ ಸರ್ಕಾರ ಈ ಬಗ್ಗೆ ಏನಾದರೂ ಗಮನ ಹರಿಸದಿದ್ದರೆ ಸಾಮಾನ್ಯ ಜನರಿಗೆ ಹೆಚ್ಚು ತೊಂದರೆಯಾಗುತ್ತದೆ. ಸರ್ಕಾರ ಈ ಬಗ್ಗೆ ಗಮನಿಸಿ ತಕ್ಷಣವೇ ಇದಕ್ಕೆ ಒಂದು ಪರಿಹಾರವನ್ನು ಒದಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

†**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)** : ಮಾನ್ಯ ಉಪಾಧ್ಯಕ್ಷರೆ, ಈಗ ಹತ್ತು ರೂಪಾಯಿವರೆಗೆ ಇದೆ. ಈ 50 ರೂಪಾಯಿ, 100 ರೂಪಾಯಿವರೆಗಾದರೂ ಈ ಸ್ಕಾಲ್ ಮೊತ್ತದೇನಿದೆ ಅದರಲ್ಲಿ ತಾವು ಇದನ್ನು ಜಾರಿಗೆ ತೆಗೆದುಕೊಂಡು ಬಂದರೆ ಅದರಿಂದ ಏನೂ ತೊಂದರೆಯಾಗುವುದಿಲ್ಲ. ನೀವು 500, 1000, 10000 ರೂಪಾಯಿ ಸ್ಟ್ಯಾಂಪ್ ಪೇಪರ್ ಇನ್‌ಸಿಸ್ಟ್ ಮಾಡುತ್ತಿದ್ದಾಗ ಹಿಂದೆ ಫೀಕ್ ಸ್ಟ್ಯಾಂಪ್ ಪೇಪರ್‌ಗಳ ಹಾವಳಿ ನಡೆಯಿತು. ಆದ್ದರಿಂದ 50 ರೂಪಾಯಿ, 100 ರೂಪಾಯಿ ವರೆಗೆ ನೀವು ಲಿಮಿಟ್‌ವರೆಗೆ ನೀವು ಸ್ಟ್ಯಾಂಪ್ ಪೇಪರ್ ಜಾರಿಗೆ ತಂದರೆ ಏನೂ ಆಗುವುದಿಲ್ಲ. ಈಗೇನಾಗಿದೆ ಎಂದರೆ ಕೋರ್ಟ್ ಫೀಸ್ ತುಂಬುವಲ್ಲಿ, ಕೋರ್ಟ್‌ನಲ್ಲಿ ಅಫಿಡೆವಿಟ್ ಮಾಡುವುದಕ್ಕೆ, ಮತ್ತೊಂದಕ್ಕೆ ಅವರು ಬ್ಯಾಂಕ್‌ಗೆ ಹೋಗಿ ನಿಲ್ಲುವಂಥದ್ದು ಆಗಿ ಎಲ್ಲವೂ ಪ್ರಾಬ್ಲಮ್ ಆಗುತ್ತಿವೆ.

ಅದಕ್ಕಾಗಿ ಕೊನೆಪಕ್ಷ 50 ರೂಪಾಯಿಯಿಂದ ನೂರು ರೂಪಾಯಿಯವರೆಗೆ ನೀವು ಸ್ಟ್ಯಾಂಪ್ ಪೇಪರ್ ಅಲೋ ಮಾಡಿದರೆ ಅದರಿಂದ ಏನೂ ತೊಂದರೆಯಾಗುವುದಿಲ್ಲ. ಫೇಕ್ ಸ್ಟಾಂಪ್ ಪೇಪರ್ ಬಗ್ಗೆ ಏನು ಅವ್ಯವಹಾರವಾಗಿದೆ ಅದರಿಂದ ಏನೂ ತೊಂದರೆಯಾಗುವುದಿಲ್ಲ.

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)